ದರ್ಶನ್‌ರ ಖ್ಯಾತಿ ಮತ್ತೆ ಗರಿಗೆದರಲಿದೆ. ಮತ್ತೊಬ್ಬ ಜನಪ್ರಿಯ ನಟ ಯಶ್ ಅಭಿನಯದ ಯಾವ ಚಿತ್ರವೂ 2017ರಲ್ಲಿ ತೆರೆಕಾಣಲಿಲ್ಲ. ಅವರು ಅಭಿನಯಿಸುತ್ತಿರುವ 'ಕೆಜಿಎಫ್' ಚಿತ್ರ ವರ್ಷಪೂರ್ತಿ ಸುದ್ದಿಯಲ್ಲಿದ್ದರೂ ಅದು ತೆರೆ ಕಾಣುವುದು 2018ರಲ್ಲೇ. ಮದುವೆ–, ಮಧುಚಂದ್ರ ಹಾಗೂ ಸಾಮಾಜಿಕ ಚಟುವಟಿಕೆಗಳ ಕಾರಣದಿಂದಾಗಿ ಯಶ್ ವರ್ಷಪೂರ್ತಿ ಸುದ್ದಿಯಲ್ಲಿದ್ದರು. ಒಂದೂ ಸಿನಿಮಾ ತೆರೆಕಾಣದೆ ಹೀಗೆ ಚಲಾವಣೆಯಲ್ಲಿರುವುದು ಸಾಮಾನ್ಯ ಸಂಗತಿಯೇನೂ ಅಲ್ಲ.

ಈ ನಾಲ್ವರ ಪ್ರಸ್ತಾಪದ ನಡುವೆ ಮಿಂಚಂತೆ ಸುಳಿದುಬರುವ ಹೆಸರು ಧ್ರುವ ಸರ್ಜಾ ಅವರದು. ಅವರ ಅಭಿನಯದ 'ಭರ್ಜರಿ' 2017ರ ಹುಲುಸು ಬೆಳೆಯಲ್ಲಿ ಎದ್ದುಕಾಣುವ ಸಿನಿಮಾ. ಧ್ರುವ ಕಾರಣದಿಂದಲೇ ಪ್ರೇಕ್ಷಕರನ್ನು ಸೆಳೆದ ಖ್ಯಾತಿ 'ಭರ್ಜರಿ' ಚಿತ್ರದ್ದು. ಶಿವರಾಜ್ ಕುಮಾರ್ ಅವರಂತೆ ಧ್ರುವ ಕೂಡ ಮೊದಲ ಮೂರೂ ಸಿನಿಮಾಗಳಲ್ಲಿ ಯಶಸ್ಸು ಗಳಿಸಿದ್ದಾರೆ. ಕನ್ನಡದ ಮುಂಚೂಣಿ ನಾಯಕನಟರ ಸಾಲಿನಲ್ಲಿ ಧ್ರುವ ಕೂಡ ಈಗ ವಿರಾಜಮಾನ.

'ಕಿರಿಕ್ ಪಾರ್ಟಿ'ಯ ರಕ್ಷಿತ್ ಶೆಟ್ಟಿ ಮತ್ತೊಬ್ಬ ಜನಪ್ರಿಯ ನಟ. ಆದರೆ, 'ಕಿರಿಕ್ ಪಾರ್ಟಿ' ಯಶಸ್ಸಿನಲ್ಲಿ ಕಥೆಗೂ ನಿರ್ದೇಶಕರಿಗೂ ನಾಯಕಿಗೂ ಪ್ರಮುಖ ಪಾಲು ಇರುವುದರಿಂದ, ಈ ಗೆಲುವನ್ನು ಸದ್ಯಕ್ಕೆ 'ಸಾಮೂಹಿಕ ಪಾರ್ಟಿ' ಎಂದೇ ಹೇಳಬೇಕು.

ನಿರ್ದಿಷ್ಟ ನಟನೊಬ್ಬನನ್ನು 'ನಂಬರ್ ಒನ್' ಎಂದು ಗುರ್ತಿಸುವುದು ಸದ್ಯದ ಸಂದರ್ಭದಲ್ಲಿ ಕಷ್ಟ. ಪುನೀತ್, ಸುದೀಪ್, ದರ್ಶನ್, ಯಶ್ ಹಾಗೂ ಧ್ರುವ – ಎಲ್ಲರೂ ನಂಬರ್ ಒನ್‌ಗಳೇ! ಹೀಗೆ ಹಲವು ನಟರು ಮುಂಚೂಣಿಯಲ್ಲಿ ಗುರ್ತಿಸಿಕೊಳ್ಳುವುದು ಉದ್ಯಮದಲ್ಲಿನ ಸ್ಪರ್ಧೆಯ ತುರುಸನ್ನು ಸೂಚಿಸುವಂತಿದೆ. ಒಂದರ್ಥದಲ್ಲಿ ಇದು ಆರೋಗ್ಯಕರ ಉದ್ಯಮದ ಲಕ್ಷಣವೂ ಹೌದು.

ನಾಯಕರ ವಿಷಯದಲ್ಲಿನ ಸಂಕೀರ್ಣತೆ ನಾಯಕಿಯರ ವಿಷಯದಲ್ಲಿಲ್ಲ. ಹರಿಪ್ರಿಯಾ, ಶ್ರುತಿ ಹರಿಹರನ್, ಶ್ರದ್ಧಾ ಶ್ರೀನಾಥ್, ಮಾನ್ವಿತಾ – ಅಚ್ಚಕನ್ನಡದ ಈ ಹುಡುಗಿಯರು ಸದ್ಯಕ್ಕೆ ಚಲಾವಣೆಯಲ್ಲಿರುವ ಕಲಾವಿದೆಯರು. ನಾಲ್ವರ ಕೈಗಳಲ್ಲೂ ಸಾಕಷ್ಟು ಅವಕಾಶಗಳಿವೆ. 'ವಿಕ್ರಂ ವೇದಾ' ಚಿತ್ರದ ಗೆಲುವಿನ ನಂತರವಂತೂ ಶ್ರದ್ಧಾ ತಮಿಳು ಚಿತ್ರರಂಗದಲ್ಲೂ ಜನಪ್ರಿಯತೆ ಗಳಿಸಿದ್ದಾರೆ. ಆದರೆ, ಸದ್ಯಕ್ಕೆ ಶ್ರುತಿ ಹರಿಹರನ್ ಕನ್ನಡ ಚಿತ್ರರಂಗದ 'ನಂಬರ್ ಒನ್' ನಟಿ ಎನ್ನಬಹುದು. ಮಹತ್ವಾಕಾಂಕ್ಷೆಯ ಕಾರಣದಿಂದಾಗಿ ಶ್ರುತಿ ಭಿನ್ನವಾಗಿ ಕಾಣಿಸುತ್ತಾರೆ. 2017ರಲ್ಲಿ ತೆರೆಕಂಡ 'ಬ್ಯೂಟಿಫುಲ್ ಮನಸುಗಳು', 'ಉರ್ವಿ', 'ತಾರಕ್' ಚಿತ್ರಗಳ ಭಾಗವಾಗಿದ್ದ ಹೆಮ್ಮೆ ಅವರದು. 2018ರಲ್ಲೂ ಶ್ರುತಿ ಅಭಿನಯದ ಚಿತ್ರಗಳ ಮೆರವಣಿಗೆ ಮುಂದುವರಿಯುವ ಎಲ್ಲ ಸೂಚನೆಗಳೂ ಇವೆ.



'ಮಫ್ತಿ'ಯಲ್ಲಿ ಚಿತ್ರರಸಿಕರ ಮನಸ್ಸು ಗೆದ್ದ ಶಿವರಾಜ್‌ಕುಮಾರ್

ಎಚ್.ಡಿ. ಕುಮಾರಸ್ವಾಮಿ ಅವರಿಗಿರುವ ಸಿನಿಮಾ 'ಸೆಳೆತ' ಗುಟ್ಟೇನಲ್ಲ. ಚುನಾವಣಾ ಕಣದಲ್ಲಿ ಸಕ್ರಿಯರಾಗಿರುವ ಅವರು, ಮಗ ನಿಖಿಲ್ ಕಾರಣದಿಂದಾಗಿ ಅವರು ಮರಳಿ ನಿರ್ಮಾಪಕರಾಗಿದ್ದಾರೆ. ಜಗ್ಗೇಶ್ ಕೂಡ ರಾಜಕಾರಣ–ಸಿನಿಮಾದ ನಡುವೆ ಕಳೆದುಹೋದಂತಿದ್ದಾರೆ. ಮಾಜಿ ರಾಜಕಾರಣಿಯೂ ಹಾಲಿ ನಟರೂ ಆಗಿರುವ ಅನಂತನಾಗ್‌ರ ರಾಜಕೀಯ ಚಿಂತನೆಗಳನ್ನು ಒಳಗೊಂಡ ಸಂದರ್ಶನವೊಂದು ಅವರ ಅಭಿಮಾನಿಗಳನ್ನು ನಿರಾಶೆಗೊಳಿಸಿರುವ ವಿದ್ಯಮಾನವೂ ವರ್ಷದ ಕೊನೆಯಲ್ಲಿ ನಡೆದಿದೆ.

### ಕುತೂಹಲಕರ ನಾಳೆಗಳು!

ಕರ್ನಾಟಕದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಚುನಾವಣಾ ರಾಜಕೀಯದ ಫಲಿತಾಂಶ 2018ರ ಮಧ್ಯಭಾಗದ ಮುನ್ನವೇ ನಿಚ್ಚಳವಾಗಲಿದೆ. ಆದರೆ, ಕನ್ನಡ ಚಿತ್ರರಂಗದ 'ಹೊಸ ಅಲೆ'ಯ ಹರಿವಿನ ದಿಕ್ಕನ್ನು ಊಹಿಸುವುದು ಸುಲಭವಲ್ಲ. ಮೊದಲ ಪ್ರಯತ್ನದಲ್ಲಿ ಯಶಸ್ವಿಯಾಗಿರುವ ನಿರ್ದೇಶಕರ ನಂತರದ ಸಿನಿಮಾಗಳ ಫಲಿತಾಂಶವೇ 'ಹೊಸ ಅಲೆ'ಯ ನಿಜಸ್ವರೂಪವನ್ನು ಸ್ಪಷ್ಟಗೊಳಿಸಲಿದೆ. ಇದರ ಜೊತೆಗೆ, ನೆರೆಯ ತಮಿಳು, ತೆಲುಗು ಭಾಷೆಗಳಲ್ಲಿನ ಜನಪ್ರಿಯ ಚಿತ್ರಗಳಲ್ಲಿನ ಪ್ರಯೋಗಗಳು ಹಾಗೂ ಮಲೆಯಾಳಂ–ಮರಾಠಿ ಚಿತ್ರರಂಗದಲ್ಲಿನ ಪರ್ಯಾಯ ಸಿನಿಮಾಗಳ ಪ್ರಯೋಗಗಳು ನಮ್ಮ ಕಣ್ಣುಕುಕ್ಕುವಂತಿವೆ. ಆ ಪ್ರಭಾವಳಿಗೆ ಹೋಲಿಸಿದರೆ ನಮ್ಮ 'ಹೊಸ ಅಲೆ'ಯ ಸೀಮಿತ ಚೌಕಟ್ಟು ಎದ್ದುಕಾಣಿಸುತ್ತದೆ. ಆದರೆ, ಜೀವನದಿಗಳ ಆರಂಭ ಪುಟ್ಟ ಹರಿವೇ ಆಗಿರುತ್ತದೆ ಎನ್ನುವ ಅರಿವೇ ಕನ್ನಡ ಚಿತ್ರರಂಗದ ನಾಳೆಗಳ ಬಗ್ಗೆ ನಿರೀಕ್ಷೆ ಉಳಿಸಿಕೊಳ್ಳಲು ಪ್ರಮುಖ ಕಾರಣವಾಗಿದೆ. ■



ASHTAVAIDYAN THAIKKATTU MOOSS
VAIDYARATNAM


ವೈದ್ಯರತ್ನಂ
ಹರ್ಬಲ್
ಸಾಬೂನು


ವೈದ್ಯರತ್ನಂ ಔಷಧ ಮಳಿಗೆಗಳಲ್ಲಿ ದೊರೆಯುತ್ತದೆ


VAIDYARATNAM
OUSHADHASALA PVT. LTD.
ಕೇಂದ್ರ ಕಛೇರಿ: ಒಲ್ಲೂರು, ತೈಕಾಡುಶೇರಿ, ತ್ರಿಶ್ಶೂರ್,
ಕೇರಳ – 680306, ದೂರವಾಣಿ: +91-487 2432732
Web: www.vaidyaratnammooss.com,
E-commerce: www.keralaayurvedamedicine.com
ಬೆಂಗಳೂರು ಟ್ರೀಟ್‌ಮೆಂಟ್ ಸೆಂಟರ್ : ನಂ. 2335, 17ನೇ ಕ್ರಾಸ್, 24ನೇ ಮೈನ್, ಸೆಕ್ಟರ್-I, ಹೆಚ್.ಎಸ್.ಆರ್. ಲೇ-ಔಟ್, ಬೆಂಗಳೂರು – 560 102. ಫೋನ್: 080–22580020
ನಮ್ಮ ಆಯುರ್ವೇದ ಔಷಧಿಗಳ ಡೀಲರ್‌ಶಿಪ್ ಮಾಹಿತಿಗೆ ಸಂಪರ್ಕಿಸಿ: 0-98863 21936
ಬದಲಾಗುವ ಕಾಲಗಳಿಗೆ, ಸತ್ವಹೀನವಾಗದ ಅಷ್ಟವೈದ್ಯ ಆಯುರ್ವೇದ ಪದ್ಧತಿ